ವಿದ್ಯುತ್ ನೀರಾವರಿ ಪಂಪ್‌ಸೆಟ್ಟು ಹಾಗೂ ಟ್ರಾನ್ಸ್‌ಫಾರ್ಮರ್ ಕೆಲಸಗಳನ್ನು ಖಾಸಗಿ ಕಂಟ್ರಾಕ್ಟರುಗಳಿಗೆ ಒಪ್ಪಿಸಿರುವ ಬಗ್ಗೆ

೮೬೧ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಕೈಗಾರಿಕಾ, ಇಂಧನ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕಂಬ ನೆಡುವುದು ಹಾಗೂ ಟ್ರಾನ್ಸ್‌ಫಾರ್ಮರ್ ಕೆಲಸಗಳಿಗೆ ವೈರಿಂಗ್ ಮಾಡುವ ಕೆಲಸಗಳನ್ನು ಖಾಸಗಿ ಕಂಟ್ರಾಕ್ಟರ್‌ಗಳಿಗೆ ಒಪ್ಪಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ಖಾಸಗಿ ಕಂಟ್ರಾಕ್ಟರುಗಳು ಮಾಡುವ ಕಳಪೆ ದರ್ಜೆಯ ಕಾಮಗಾರಿಯಿಂದ ರೈತರುಗಳು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಸುರಕ್ಷತೆಗಾಗಿ ಹಾಗೂ ಒಳ್ಳೆಯ ದರ್ಜೆಯ ಕೆಲಸದ ಸಲುವಾಗಿ ಈ ಕಾರ್ಯಗಳನ್ನು (ಕಂಬ ನೆಡುವುದು ಹಾಗೂ ವೈರಿಂಗ್ ಮಾಡುವುದು) ಕೆ.ಇ.ಬಿ. ಗ್ಯಾಂಗ್ ಮನ್‌ಗಳಿಗೆ ವಹಿಸಲಾಗುವುದೇ ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಮತ್ತು ಪಕ್ಷ ಮಂತ್ರಿಗಳು)—

ಅ) ಹೌದು.

ಆ) ಈ ಖಾಸಗಿ ಗುತ್ತಿಗೆದಾರರು ಮಾಡುವ ಕಳಪೆ ದರ್ಜೆಯ ಕಾಮಗಾರಿಯಿಂದ ರೈತರುಗಳು ತೊಂದರೆಯನ್ನು ಅನುಭವಿಸುತ್ತಿರುವ ಬಗ್ಗೆ ನಿರ್ದಿಷ್ಟ ದೂರುಗಳು ಮಂಡಳಿಯ ಗಮನಕ್ಕೆ ಬಂದಿಲ್ಲ.

ಇ) ಈ ಕಾರ್ಯವನ್ನು ಕೆ. ಇ. ಬಿ. ಗ್ಯಾಂಗ್‌ಮನ್‌ಗಳಿಗೆ ಮತ್ತೆ ವಹಿಸುವ ಬಗ್ಗೆ ಯಾವ ಪ್ರಸ್ತಾವನೆಯು ಮಂಡಳಿಯ ಮುಂದಿಲ್ಲ.

ಪಾನ ನಿಷೇಧ ಜಾರಿಗೊಳಿಸುವ ಬಗ್ಗೆ

೮೮೯ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸರ್ಕಾರವು ಪಾನ ನಿಷೇದದ ಬಗ್ಗೆ ದೃಢವಾದ ನಿಲುವು ತಳೆದು ಕೊನೆಯ ಪಕ್ಷ ಚಿತ್ರದುರ್ಗ ಜಿಲ್ಲೆಯಲ್ಲಿ ಪಾನ ನಿಷೇದ ಜಾರಿಗೆ ತರಲು ಪರಿಶೀಲಿಸುವುದೆ ?

ಆ) ಹಾಗಿದ್ದಲ್ಲಿ, ಪಾನ ನಿಷೇದ ಜಾರಿಗೆ ಎಂದಿನಿಂದ ತರಲಾಗುವುದು,

ಇ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಸಚಿವರು)—

ಅ) ಸಧ್ಯದಲ್ಲಿ ಸರ್ಕಾರದ ಮುಂದೆ ಈ ಪ್ರಸ್ತಾಪ ಇರುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸರ್ಕಾರವು ಪೂರ್ಣ ಪಾನ ನಿಷೇಧ ನೀತಿಯನ್ನು ಹೊಂದಿರುವುದಿಲ್ಲ.

ಸಂಪೂರ್ಣ ಪಾನನಿರೋಧ ಜಾರಿಗೆ ತರುವ ಬಗ್ಗೆ

೭೭೬ ಶ್ರೀ ಎಂ. ಬಿ. ದಿವಟರ್ (ಕೊಪ್ಪಳ)—ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹೆಂಡದ ಮಾರಾಟವನ್ನು ನಿಷೇಧ ಮಾಡಿರುವುದರಿಂದ ಪೂರ್ಣ ಪಾನ ನಿರೋಧ ಜಾರಿಗೆ ತರಲಾಗುವುದೆ ?

ಆ) ಕೆಲವು ಜಿಲ್ಲೆಗಳಲ್ಲಿ ಸಾರಾಯಿ ಮಾರಾಟದ ವಿರುದ್ಧ ಚಳುವಳಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧ ಜಾರಿಗೆ ಬಂದಲ್ಲಿ ಆದಾಯ ಕೊರತೆ ಎಷ್ಟಾಗಬಹುದು ?